ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 47 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ) |
| ಉತ್ತರಿಸಬೇಕಾದ ದಿನಾಂಕ | 07-12-2020 |
| ಪ್ರಶ್ನೆ | ಉತ್ತರ |
| (ಅ) ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು; (ವಿಷಯ ವಾರು ಪ್ರತ್ಯೇಕವಾಗಿ ವಿವರ ನೀಡುವುದು) | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಬ್ಯಾಕ್‌ಲಾಗ್ ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ. ಸಂ. | ವಿಶ್ವವಿದ್ಯಾನಿಲಯದ ಹೆಸರು | ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ | ವಿಷಯವಾರು ಮಾಹಿತಿ |
|---|---|---|---|
| 1 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ | 01 | ವಾಟರ್ ಅಂಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ |
| 2 | ಕರ್ನಾಟಕ ವಿಶ್ವವಿದ್ಯಾನಿಲಯ | 09 | ಫ್ರೆಂಚ್ – 02, ಸೈಕಾಲಜಿ –01, ಮೆರಿನ್ ಬಯಾಲಜಿ – 01, ಸಂಖ್ಯಾಶಾಸ್ತ್ರ–02, ಫಿಜಿಕ್ಸ್ – 01, ಜುವಾಲಜಿ – 01, ಮ್ಯೂಸಿಕ್–01. |
| 3 | ತುಮಕೂರು ವಿಶ್ವವಿದ್ಯಾನಿಲಯ | 07 | ಗಣಿತ–2, ಕಂಪ್ಯೂಟರ್ ಸೈನ್ಸ್–01, ಭೌತಶಾಸ್ತ್ರ–03, ಎಲೆಕ್ಟ್ರಾನಿಕ್ಸ್–01 |
| 4 | ಬೆಂಗಳೂರು ವಿಶ್ವವಿದ್ಯಾನಿಲಯ | 07 | ಭೂಗರ್ಭಶಾಸ್ತ್ರ–01, ಉಡುಪು ತಂತ್ರಜ್ಞಾನ–01, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ–01, ಪರಿಸರ ಅಧ್ಯಯನ–01, ಜೀವ ವಿಜ್ಞಾನ–01, ಭೌತಶಾಸ್ತ್ರ–01, ವಾಸ್ತುಶಿಲ್ಪ–01. |
| 5 | ಕುವೆಂಪು ವಿಶ್ವವಿದ್ಯಾನಿಲಯ | 01 | ಭೌತಶಾಸ್ತ್ರ/ಎಲೆಕ್ಟ್ರಾನಿಕ್ಸ್ |
| 6 | ಮೈಸೂರು ವಿಶ್ವವಿದ್ಯಾನಿಲಯ | 63 | ಇತಿಹಾಸ–2, ಅಂಥ್ರೋಪಾಲಜಿ–1, ಬಯೋಟೆಕ್ನಾಲಜಿ–2, ಬಾಟನಿ–2, ಬಿಸಿನೆಸ್ ಅಡ್ಮಿನಿಸ್ಟ್ರೇಷನ್–1, ಕೆಮಿಸ್ಟ್ರಿ–3, ಕಾಮರ್ಸ್–1, ಕಮ್ಯುನಿಕೇಷನ್ ಅಂಡ್ ಜರ್ನಲಿಸಂ–03, ಕ್ರಿಮಿನಾಲಜಿ ಅಂಡ್ ಫರೆನ್ಸಿಕ್ ಸೈನ್ಸ್–01, ಅರ್ಥ್ ಸೈನ್ಸ್–04, ಎಕನಾಮಿಕ್ಸ್–01, ಎಜುಕೇಷನ್–01, ಇಂಗ್ಲೀಷ್–02, ಜಿಯೋಗ್ರಫಿ–4, ಹಿಂದಿ–1, ಕನ್ನಡ–03, ಲೈಬ್ರರಿ ಅಂಡ್ ಇನ್‌ಫರ್ಮೇಷನ್ ಸೈನ್ಸ್–01, ಮ್ಯಾಥಮೆಟಿಕ್ಸ್–04, ಮೈಕ್ರೋ ಬಯಾಲಜಿ–01, ಫಿಲಾಸಫಿ–02, ಫಿಜಿಕ್ಸ್–03, ರಾಜ್ಯಶಾಸ್ತ್ರ–01, ಮನೋಶಾಸ್ತ್ರ–03, ಸಂಸ್ಕೃತ–02, ಸೆರಿಕಲ್ಚರ್ ಸೈನ್ಸ್–01, ಸಮಾಜಶಾಸ್ತ್ರ–01, ಸಂಖ್ಯಾಶಾಸ್ತ್ರ–04, ಉರ್ದು–02, ಪ್ರಾಣಿಶಾಸ್ತ್ರ–03.<br><br>02 ಸಹಾಯಕ ಪ್ರಾಧ್ಯಾಪಕರು (ಪಿಜಿ) ಮತ್ತು 01 ಸಹಾಯಕ ಪ್ರಾಧ್ಯಾಪಕರು (ಯುಜಿ) ಬ್ಯಾಕ್‌ಲಾಗ್ ಹುದ್ದೆಗಳಿಗೆ Clubbed reservation ಅಳವಡಿಸಬೇಕಾಗಿರುವುದರಿಂದ, ಈ ಮೂರು ಹುದ್ದೆಗಳ ವಿಷಯವಾರು ಮಾಹಿತಿಯನ್ನು ನೀಡಲು ಸಾಧ್ಯವಾಗುವುದಿಲ್ಲ. |

| | | |
|---|---|---|
| | | 7 \| ಮಂಗಳೂರು ವಿಶ್ವವಿದ್ಯಾನಿಲಯ \| 02 \| ಗಣಕ ವಿಜ್ಞಾನ-01, ಸಂಖ್ಯಾಶಾಸ್ತ್ರ-01<br>ಉಳಿದಂತೆ ಕನ್ನಡ, ಗುಲ್ಬರ್ಗಾ, ದಾವಣಗೆರೆ, ವಿಜಯನಗರ ಶ್ರೀಕೃಷ್ಣದೇವರಾಯ, ರಾಣಿ ಚನ್ನಮ್ಮ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಕರ್ನಾಟಕ ಜಾನಪದ, ಕರ್ನಾಟಕ ರಾಜ್ಯ ಮುಕ್ತ, ಅಕ್ಕಮಹಾದೇವಿ ಮಹಿಳಾ, ಸಂಸ್ಕೃತ, ಮಂಡ್ಯ, ನೃಪತುಂಗ, ರಾಯಚೂರು, ಮಹಾರಾಣಿ ಕ್ಲಸ್ಟರ್ ಮತ್ತು ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಇರುವುದಿಲ್ಲ. |
| (ಆ) | ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು; | ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳು ಹಾಗೂ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ವಿಶ್ವವಿದ್ಯಾನಿಲಯಗಳು ರಚಿಸಿಕೊಂಡಿರುವ ಪರಿನಿಯಮಾವಳಿಯನುಸಾರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು. |
| (ಇ) | ಇದುವರೆವಿಗೂ ಸದರಿ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣಗಳೇನು; | ರಾಜ್ಯದಲ್ಲಿ ಕೋವಿಡ್-19 ನಿಂದ ಉಂಟಾದ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಅಗತ್ಯವಾಗಿರುವುದರಿಂದ, 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹಾಗೂ ಬ್ಯಾಕ್‌ಲಾಗ್ ಹುದ್ದೆಗಳೂ ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಆರ್ಥಿಕ ಇಲಾಖೆಯು ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ:06.07.2020ರಲ್ಲಿ ತಡೆಹಿಡಿದಿರುತ್ತದೆ. ಆದ್ದರಿಂದ, ಬ್ಯಾಕ್‌ಲಾಗ್ ಹುದ್ದೆಗಳನ್ನು ಒಳಗೊಂಡಂತೆ ಎಲ್ಲಾ ಬೋಧಕ/ ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿರುತ್ತದೆ. |
| (ಈ) | ಯಾವ ಕಾಲ ಮಿತಿಯಲ್ಲಿ ಭರ್ತಿ ಮಾಡಲಾಗುವುದು? | ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಕುರಿತಂತೆ ಆರ್ಥಿಕ ಇಲಾಖೆಯು ವಿಧಿಸಿದ ನಿರ್ಬಂಧಗಳು ತೆರವುಗೊಂಡ ನಂತರ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಮಾಡುವ ಕುರಿತಂತೆ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. |

ಸಂಖ್ಯೆ: ಇಡಿ 363 ಯುಎನ್‌ಇ 2020

**(ಡಾ: ಅಶ್ವತ್ಥ್ ನಾರಾಯಣ ಸಿ.ಎನ್.)**
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ & ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)